ಇಂಗ್ಲಿಷಿನಲ್ಲೂ ಬರೆದಿದಿನಿ. **Femina, Women's Era, News Weekly**ಗೆಲ್ಲ ಬಹಳ ಬರೀತಿದ್ದೆ. ಲೇಖನಗಳನ್ನೂ ಬರೆದೆ, ಕತೆಗಳನ್ನೂ ಬರೆದಿದ್ದೆ. ಮುಂಬೈ ಆಕಾಶವಾಣಿಯಲ್ಲಿ ಕತೆ, ಕವನಗಳನ್ನು ಓದುವ ಅವಕಾಶಗಳು ಸಿಕ್ಕವು.

ಸುಮಾರು 1970ರ ಕೊನೆಯಿಂದ ಎಂಬತ್ತರ ಶುರುವಿನವರೆಗೂ ಮುಂಬೈನ ಖ್ಯಾತ ಸೋಫಿಯಾ ಕಾಲೇಜು 'ಸೋಫಿಯ ಓಪನ್ ಕ್ಲಾಸ್ ರೂಂ' ಎನ್ನುವ ಕಮ್ಮಟಗಳನ್ನು ನಡೆಸುತ್ತಿತ್ತು. ಇದರಲ್ಲಿ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಹಲವು ವಿಷಯಗಳ ಕುರಿತು ಕಮ್ಮಟಗಳು ನಡೀತಿದ್ದವು. ಸುಮಾರು 14 ಕಮ್ಮಟಗಳಲ್ಲಿ ಭಾಗವಹಿಸಿದ್ದೆ. ಇದು ವಿಶ್ವ ಸಾಹಿತ್ಯಕ್ಕೆ ಪ್ರವೇಶವನ್ನು ಒದಗಿಸಿತು. ಆಧುನಿಕ ಬರಹಗಾರರ ಪರಿಚಯ ಮಾಡಿಸಿಕೊಟ್ಟಿತು.

ಮುಂಬೈನ ಸಾಹಿತ್ತಿಕ ಸ್ನೇಹವಲಯದಲ್ಲಿ ಯಶವಂತ ಚಿತ್ತಾಲರು, ಜಯಂತ ಕಾಯ್ಕಿಣಿ, ಮುಕುಂದ ಜೋಶಿ, ಮಿತ್ರಾ ವೆಂಕಟರಾಜ್, ತುಳಸಿ ವೇಣುಗೋಪಾಲ್, ಕನಕ ಮೊದಲಾದವರು ಇದ್ದೆವು. ಕಾರ್ಯಕ್ರಮಗಳಲ್ಲಿ ಭೇಟಿ ಆಗುತ್ತಿದ್ದೆವು. ಪರಸ್ಪರ ಬರೆದದ್ದನ್ನು ವಿನಿಮಯ ಮಾಡಿಕೊಂಡು ಅಭಿಪ್ರಾಯಗಳನ್ನು ಹಂಚಿಕೊಳ್ಳುತ್ತಿದ್ದೆವು. ಮಲಯಾಳಂ ಲೇಖಕಿ ಮಾನಸಿ, ಮರಾಠಿ ಲೇಖಕಿ ಲಲಿತಾ, ಹೀಗೆ ಬೇರೆ ಬೇರೆ ಭಾಷೆಯ ಬರಹಗಾರರ ಪರಿಚಯವಿತ್ತು.

ಹೀಗೆ ಕೆಲಸ ಮತ್ತೊಂದು ಅಂತ ಓಡಾಡಲು ಶುರುಮಾಡಿದ ಮೇಲೆ ಬಸ್ಸು, ಟ್ರೈನುಗಳಲ್ಲಿ ಓಡಾಡುತ್ತಿದ್ದೆ. ಆಗ ಸಿಕ್ಕ ಅನುಭವಗಳು ಅದ್ಭುತವಾಗಿದ್ದವು. ನೀವು ಸೂಕ್ಷ್ಮವಾಗಿ ಗಮನಿಸಿದರೆ ಇಂತಹ ಅನುಭವಗಳು ನಿಮ್ಮದಾಗುತ್ತವೆ. ಹೀಗೆ ಮುಂಬೈ ನನ್ನೊಳಗೆ ಇಳಿದುಬಿಟ್ಟಿತು.

ನಾನು ಬೆಳೆದುಬಂದಿದ್ದ ಜಗತ್ತು ಬಹಳ **innocent** ಆಗಿ **simple** ಆಗಿತ್ತು. ಮುಂಬೈ ಜಗತ್ತು ಹೊಸದು. ಅದು ನನ್ನಲ್ಲಿ ಹೊಸ ಆಲೋಚನೆಗಳನ್ನು ಹುಟ್ಟುಹಾಕಿ, ಕ್ರಿಯೇಟಿವಿಟಿಯನ್ನ ಹೊರಹೊಮ್ಮುವಂತೆ ಮಾಡೋದು. ಮುಂಬೈ ಅದೊಂದು ತರಹ **very liberating** ಜಾಗ. ಅಲ್ಲಿ ನೀವು **gender consicious** ಆಗಿರಲ್ಲ. ನೀವು ಹೊರಗೆ ಹೋದಾಗ ನೀವು ಹೆಣ್ಣು ಅನ್ನೋ ಪ್ರಜ್ಞೆ ಸದಾ ಜಾಗೃತವಾಗಿರಲ್ಲ. ಬಸ್ಸಿನಲ್ಲಿ ಹೋದರೂ ಟ್ರೈನಲ್ಲಿ ಹೋದರೂ ಎಲ್ಲೂ ನಿಮ್ಮನ್ನು ಅದು ಕಾಡಲ್ಲ. ಎಲ್ಲರೂ ತಮ್ಮ ಪಾಡಿಗೆ ತಾವು ತಮ್ಮ ಕೆಲಸ ಮಾಡ್ಕೊಂಡು ಹೋಗ್ತಿರ್ತಾರೆ. 'ನೀವು ಹೆಂಗಸು' ಅನ್ನೋ ಒಂದು **awareness** ಇರುತ್ತಲ್ಲ. ಅದು ಅಲ್ಲಿರಲ್ಲ. ಹೆಂಗಸರ ಜೊತೆ ಮಾತಾಡಿದಷ್ಟೇ ಫ್ರೀಯಾಗಿ ಗಂಡಸರ ಜೊತೆನೂ ಮಾತಾಡ್ತಿರಿ. ಸಹಜವಾಗಿಯೇ ನಾನು ಮೊದಲಿಂದ ಹಾಗೆ ಇದ್ದದ್ದು. ಅಲ್ಲೂ ಅಂತಹದ್ದೇ ವಾತಾವರಣ ಇತ್ತು. ಹಾಗಾಗಿ, ಅದು ನನ್ನ ಬರವಣಿಗೆಯಲ್ಲೂ ಬಂತು. ಅದಕ್ಕೆ ನನ್ನ ಮೊದಲ ಕತೆಗಳನ್ನು ಗಮನಿಸಿದರೆ ಅದರಲ್ಲಿ ಮುಂಬೈ ಹೆಚ್ಚು ಕಾಣುತ್ತೆ. ಪಾತ್ರಗಳು ಕೂಡ ಈ ಅನುಭವದ ಹಿನ್ನಲೆಯಲ್ಲಿ ರೂಪುಗೊಂಡಿವೆ.

ಜಾಹೀರಾತು ಜಗತ್ತಿಗೆ ಹೋಗಿದ್ದರಿಂದ ಮುಂಬೈ ಮಾರುಕಟ್ಟೆಯ ವ್ಯಾಪಾರಿ ಜಗತ್ತಿನ ಪರಿಚಯವಾಯಿತು. ಹಣ ಸಂಪಾದನೆಗಾಗಿಯೇ ಎಷ್ಟೋ ಜನ ಮುಂಬೈಗೆ ಬರ್ತಾರೆ. ಈ ಎಲ್ಲ ಅನುಭವವಗಳು ಬರವಣಿಗೆಯ ಹಿನ್ನೆಲೆಯಲ್ಲಿವೆ.

◆ ನಿಮ್ಮ ಕತೆಗಳ ಕತೆ...

ಎಲ್ಲೋ ನೋಡಿದ ವ್ಯಕ್ತಿ, ಚಿತ್ರಗಳು, ಎಂದೋ ನಡೆದ ಘಟನೆ, ಮಿಂಚಿ ಮರೆಯಾದ ಯಾವುದೋ ಕ್ಷಣ, ಯಾವುದೋ ಕನಸು, ಕಾಡಿದ ಭಾವ – ಹೀಗೆ ನೂರಾರು ವಿಷಯಗಳು ಬದುಕಿನುದ್ದಕ್ಕೂ ಕಾಡುತ್ತಲೇ ಇರುತ್ತವೆ. ಇವೆಲ್ಲವೂ ಮನಸಿನ ಯಾವುದೋ ಮೂಲೆಯಲ್ಲಿ ಉಳಿದು ಪ್ರತಿಮೆಗಳಾಗಿ ಬೆಳೆಯುತ್ತಿರುತ್ತವೆ. ಕತೆಯಾಗಿ ಹೊರಬರುವ ಕ್ಷಣಕ್ಕಾಗಿ ಕಾದು ಕೂತಿರುತ್ತವೆ. ಆ ಬಿಡುಗಡೆಯ ಕ್ಷಣ